ಎಸ್ವಿಎಂವಿವಿಎಸ್
ಎಸ್. ವ್ಹಿ. ಎಂ. ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ, ಇಳಕಲ್

# ಕನ್ನಡ ವಿಭಾಗ

## ಡಾ. ಸದಾಶಿವ ದೊಡಮನಿ
## ಸಹಾಯಕ ಪ್ರಾಧ್ಯಾಪಕರು
## ವರ್ಗ: ಬಿ.ಎ. ೩ ನೇ ಸೆಮಿಸ್ಟರ್(ಐಚ್ಛಿಕ ಕನ್ನಡ)

# ಆಧುನಿಕ ಕನ್ನಡ ಸಾಹಿತ್ಯ

1. ಆಧುನಿಕ ಕನ್ನಡ ಸಾಹಿತ್ಯದ ಉಗಮ :

- ವಿಕಾಸ, ಪ್ರಭಾವ-ಪ್ರೇರಣೆ
- ಆಧುನಿಕ ಕನ್ನಡ ಸಾಹಿತ್ಯದ ಸ್ವರೂಪ, ಲಕ್ಷ್ಮಣಗಳು
- ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ರೂಪಗಳು, ಪ್ರಮುಖ ಪ್ರಕಾರಗಳು.

# ಆಧುನಿಕ ಕನ್ನಡ ಸಾಹಿತ್ಯದ ಉಗಮ, ವಿಕಾಸ, ಪ್ರಭಾವ ಹಾಗೂ ಪ್ರೇರಣೆ :

ಹತ್ತೊಂಬತ್ತನೆಯ ಶತಮಾನದ ಕೊನೆ, ಇಪ್ಪತ್ತನೆಯ ಶತಮಾನದ ಮೊದಲ ಭಾಗವನ್ನು ಆಧುನಿಕ ಕನ್ನಡ ಸಾಹಿತ್ಯದ ಕಾಲವೆಂದು ಗುರುತಿಸುತ್ತಾರೆ. ಈ ಕಾಲವನ್ನು ಹೊಸ ಹುಟ್ಟುಗಳ ಕಾಲ ಎಂದು ಕರೆಯುತ್ತಾರೆ. ಇಂಗ್ಲಿಷ್ ಶಿಕ್ಷಣ ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಪ್ರಭಾವ ಪ್ರೇರಣೆಗೆ ಕಾರಣವಾಗಿದೆ. ಇದರ ಜತೆಗೆ ಆಂತರಿಕ ಕಾರಣಗಳೂ ಇದ್ದು, ಹೊಸತನಕ್ಕೆ ಭಾಷ್ಯ ಬರೆದಿವೆ.

# ಆಧುನಿಕ ಕನ್ನಡ ಸಾಹಿತ್ಯದ ಸ್ವರೂಪ ಲಕ್ಷಣಗಳು :

ಹೊಸ ಆಲೋಚನೆ, ಚಿಂತನಕ್ರಮ ಹೊಸ ಅಭಿವ್ಯಕ್ತಿ ಆಧುನಿಕ ಕನ್ನಡ ಸಾಹಿತ್ಯದ ಸ್ವರೂಪವನ್ನು ಕಟ್ಟಿ ಕೊಡುವ ಪ್ರಮುಖ ಅಂಶಗಳು. ಅವೇ ಅದರ ಲಕ್ಷಣ. ಜತೆಗೆ ಭಾವಗೀತೆಯ ಗುಣ, ಸಮಕಾಲೀನ ವೈರುಧ್ಯಗಳಿಗೆ ಪ್ರತಿಕ್ರಿಯೆ, ಭಾವ ತೀವ್ರತೆ. ಆಧ್ಯಾತ್ಮಿಕತೆ, ಪ್ರಕೃತಿ ಪ್ರೇಮ, ರಾಷ್ಟ್ರೀಯ ಪ್ರಜ್ಞೆ, ಕರ್ನಾಟಕ ಏಕೀಕರಣ ನಿಲುವು, ಹೊಸ ಛಂದೋಬಂಧ ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಲಕ್ಷಣಗಳು.

# ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ರೂಪಗಳು ಮತ್ತು ಪ್ರಕಾರಗಳು :

ಕಾವ್ಯ, ಕಥೆ, ನಾಟಕ, ಪ್ರಬಂಧ, ಕಾದಂಬರಿ, ಜೀವನ ಚರಿತ್ರೆ ಮೊದಲಾದವುಗಳನ್ನು ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ರೂಪಗಳಾಗಿವೆ. ಇದಕ್ಕೆ ಮುಖ್ಯ ಕಾರಣ ಇಂಗ್ಲಿಷ್ ಶಿಕ್ಷಣ ಹಾಗೂ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ. ಇದರಿಂದಾಗಿ ನಮ್ಮ ಸಾಂಪ್ರದಾಯಿಕ ಸಾಹಿತ್ಯದ ರಚನಾ ಬಂಧವನ್ನು ಮುರಿದು, ಹೊಸ ವಿನ್ಯಾಸ ದಲ್ಲಿ ಬರೆಯುವ ಮತ್ತು ನೋಡುವ ಸನ್ನಿವೇಶವನ್ನು ಇಲ್ಲಿ ಕಾಣುತ್ತೇವೆ.

# ಆಧುನಿಕ ಕನ್ನಡ ಸಾಹಿತ್ಯದ ಪ್ರಕಾರಗಳು :

ಕನ್ನಡ ಸಾಹಿತ್ಯದ  ಪ್ರಕಾರಗಳು :

ಅ. ನವೋದಯ

ಆ. ಪ್ರಗತಿಶೀಲ

ಇ. ನವ್ಯ

ಈ. ದಲಿತ –ಬಂಡಾಯ

ಉ. ಮಹಿಳಾ ಸಾಹಿತ್ಯ

ಧನ್ಯವಾದಗಳು